# ಸ್ಪಿನ್ನರ್‌ಗಳ ತೊಟ್ಟಿಲಿನ ಕಂದ



ಗುಜರಾತ್‌ನ ಜಾಮ್‌ನಗರದಿಂದ ರಾಜಕೋಟ್ ಮತ್ತು ನಡಿಯಾದ್‌ವರೆಗಿನ 300 ಕಿ.ಮೀ. ಸುತ್ತಳತೆಯ ಪ್ರದೇಶವನ್ನು ಎಡಗೈ ಸ್ಪಿನ್ನರ್‌ಗಳ ತೊಟ್ಟಿಲು ಎಂದು ಕರೆಯಬಹುದೇನೋ. ದಂತಕಥೆಯಾಗಿ ಹೋಗಿರುವ ಸ್ಪಿನ್ ಮಾಂತ್ರಿಕ ವಿನೂ ಮಂಕಡ್, ರವೀಂದ್ರ ಜಡೇಜಾ ಸೇರಿದಂತೆ ಭಾರತ ಕ್ರಿಕೆಟ್ ತಂಡದ ಏಳು ಜನ ಎಡಗೈ ಸ್ಪಿನ್ನರ್‌ಗಳು ಇದೇ ಭಾಗದಿಂದ ಬಂದವರು. ಇಂಗ್ಲೆಂಡ್ ವಿರುದ್ಧದ ಮೊದಲ ಎರಡು ಟೆಸ್ಟ್ ಪಂದ್ಯಗಳಲ್ಲಿ 18 ವಿಕೆಟ್ ಕಿತ್ತ ಅಕ್ಷರ್ ಪಟೇಲ್ ಕೂಡ ಈ ‘ಸ್ಪಿನ್ನರ್‌ಗಳ ತೊಟ್ಟಿಲಿ’ನಲ್ಲೇ ಬೆಳೆದ ಕಂದ.

ಅಹ್ಮದಾಬಾದ್‌ನಿಂದ ಕೇವಲ 60 ಕಿ.ಮೀ. ದೂರದಲ್ಲಿರುವ ನಡಿಯಾದ್, ಅಕ್ಷರ್ ಅವರ ಊರು. ಭಾರತ ತಂಡದಲ್ಲಿ ಮಿಂಚುತ್ತಿರುವ ಈ ಎಡಗೈ ಸ್ಪಿನ್ನರ್ ಬಗೆಗೆ ನಡಿಯಾದ್ ಜನರಿಗೆ ಎಲ್ಲಿಲ್ಲದ ಪ್ರೀತಿ. ತಂಡೋಪತಂಡವಾಗಿ ಅಕ್ಷರ್ ಅವರ ಮನೆಗೆ ಬರುತ್ತಿರುವ ಜನ, ಅವರ ಪಾಲಕರಿಗೆ ಅಭಿನಂದನೆ ಹೇಳಿ ಹೋಗುವುದು ಈಗ ಮಾಮೂಲಾಗಿಬಿಟ್ಟಿದೆ. ಅಕ್ಷರ್ ಅವರಿಗೆ ಈಗ 27 ವರ್ಷ. ಹಾಗೆ ನೋಡಿದರೆ ಅವರು ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿ ವರ್ಷಗಳೇ ಕಳೆದಿರಬೇಕಿತ್ತು. ಆದರೆ, ವಿಳಂಬದ ಆ ನೋವನ್ನು ಮರೆತ ಈ ಗುಜರಾತಿ ಆಟಗಾರ, ಸಿಕ್ಕ ಅವಕಾಶವನ್ನು ಚೆನ್ನಾಗಿಯೇ ಬಾಚಿಕೊಂಡಿದ್ದಾರೆ.

ಅಕ್ಷರ್ ಎಂಬ ಹೆಸರನ್ನು ಇಂಗ್ಲಿಷ್‌ನಲ್ಲಿ **Akshar** ಎಂದು ಬರೆಯುವುದು ರೂಢಿ. ಆದರೆ, ಈ ಆಟಗಾರ **Axar** ಎಂದು ಬರೆದುಕೊಳ್ಳುತ್ತಾರೆ. ಯಾಕೆ ಹೀಗೆ ಎಂಬ ಪ್ರಶ್ನೆ ಕಾಡುವುದಲ್ಲವೇ? ಈ ಪ್ರಶ್ನೆಯನ್ನು ಅವರ ಕುಟುಂಬದ ಸದಸ್ಯರ ಮುಂದಿಟ್ಟಾಗ, ‘ಅಕ್ಷರ್ ಜನಿಸಿದಾಗ ನರ್ಸ್ ಮಾಡಿದ ಎಡವಟ್ಟಿನಿಂದ ಹೀಗಾಗಿದೆ. ಆಗ ಮಾಡಿದ ಸ್ಪೆಲ್ಲಿಂಗ್ ಮಿಸ್ಟೇಕ್ ಹಾಗೇ ಮುಂದುವರಿದಿದೆ. ಇರಲಿ ಬಿಡಿ, ಅದರಿಂದ ಏನೂ ತೊಂದರೆ ಇಲ್ಲ’ ಎಂದು ಅವರ ಕುಟುಂಬದ ಸದಸ್ಯರು ಹೇಳುತ್ತಾರೆ.

ಅಕ್ಷರ್ ಅವರ ತಂದೆ ರಾಜೇಶ್‌ಭಾಯಿ ಅವರು ರಸಗೊಬ್ಬರ ಮಾರಾಟದ ಏಜೆನ್ಸಿ ಹೊಂದಿದ್ದಾರೆ. ಮಧ್ಯಮ ವರ್ಗದ ಪಟೇಲ್ ಕುಟುಂಬದ ಕುಡಿ ಅಕ್ಷರ್‌ಗೆ ಕ್ರಿಕೆಟ್ ಆಡುವ ಉಮೇದಿ. ಆಗ ರಾಜೇಶ್‌ಭಾಯಿ ಅವರ ಮುಂದೆ ಇಟ್ಟಿದ್ದು ಎರಡು ಆಯ್ಕೆಗಳನ್ನು. ‘ನೀನು ಭವಿಷ್ಯ ರೂಪಿಸಿಕೊಳ್ಳುವುದು ಕ್ರಿಕೆಟ್‌ನಲ್ಲೋ ಅಥವಾ ಅಧ್ಯಯನದಲ್ಲೋ’ ಎಂಬ ತಂದೆಯ ಪ್ರಶ್ನೆಗೆ ಅಕ್ಷರ್ ಹಿಂದು–ಮುಂದು ನೋಡದೆ ಕ್ರಿಕೆಟ್ ಎಂದು ಉತ್ತರಿಸಿದರು. ಮೊದಮೊದಲು ಬ್ಯಾಟಿಂಗ್‌ನಲ್ಲಿ ‘ಬಲ’ ಹೊಂದಿದ್ದ ಅಕ್ಷರ್, ಬಳಿಕ ವೇಗದ ಬೌಲರ್ ಆದರು. ಅಪಘಾತವೊಂದರಲ್ಲಿ ಕಾಲಿಗೆ ಪೆಟ್ಟು ಮಾಡಿಕೊಂಡ ಬಳಿಕ ಅವರು ಸ್ಪಿನ್ನರ್ ಆಗಿ ರೂಪಾಂತರ ಹೊಂದಿದರು. ಅವರ ಪ್ರತಿಭೆಗೆ ಸಾಣೆ ಹಿಡಿದಿದ್ದು ಗುಜರಾತ್‌ನ ಖೇಡ ಕ್ರಿಕೆಟ್ ಅಕಾಡೆಮಿ. ಊರಿನಲ್ಲಿ ಅಗತ್ಯ ಸೌಲಭ್ಯ ಇಲ್ಲದಿದ್ದರೂ ಪರಸ್ಥಳಕ್ಕೆ ಹೋಗಿ ಅವರು ಕ್ರಿಕೆಟ್‌ನ ಪಾಠ ಕಲಿತಿದ್ದು, ಅಭ್ಯಾಸ ನಡೆಸಿದ್ದನ್ನು ನೋಡಿದರೆ ನಮ್ಮ ಸುನಿಲ್ ಜೋಶಿ ಅವರ ಸಾಧನೆ ನೆನಪಿಗೆ ಬರುತ್ತದೆ. ಅವರೂ ನಿತ್ಯ ಗದಗಿನಿಂದ ಹುಬ್ಬಳ್ಳಿಗೆ ಕ್ರಿಕೆಟ್ ಅಭ್ಯಾಸಕ್ಕಾಗಿಯೇ ಹೋಗಿ ಬರುತ್ತಿದ್ದರು. ಕಾಕತಾಳೀಯ ಎನ್ನುವಂತೆ ಅವರೂ ಎಡಗೈ ಸ್ಪಿನ್ನರ್.

‘ನನ್ನ ಪತ್ನಿಗೆ ಅಕ್ಷರ್ ಕ್ರಿಕೆಟ್ ಆಡುವುದು ಇಷ್ಟವಿರಲಿಲ್ಲ. ಏಕೆಂದರೆ, ಎಲ್ಲಿ ಮಗನಿಗೆ ಚೆಂಡು ಬಡಿದು ಬಿಡುವುದೋ ಎನ್ನುವ ಆತಂಕ ಅವಳಿಗಿತ್ತು’ ಎಂದು ಗಹಗಹಿಸಿ ನಗುತ್ತಾರೆ ರಾಜೇಶ್‌ಭಾಯಿ. ಅವರು ಹಾಗೆ ಹೇಳುವಾಗ ಪಕ್ಕದಲ್ಲಿಯೇ ಇದ್ದ ಅವರ ಪತ್ನಿ ಪ್ರೀತಿ ಅವರ ಮೊಗದಲ್ಲಿ ಮಗನ ಸಾಧನೆ ಕುರಿತು ಎಲ್ಲಿಲ್ಲದ ಹೆಮ್ಮೆ ಎದ್ದು ಕಾಣುತ್ತದೆ. ಗುಜರಾತ್ ರಣಜಿ ತಂಡಕ್ಕೆ ಅಕ್ಷರ್ ಆಯ್ಕೆಯಾಗುವವರೆಗೆ ನಡಿಯಾದ್‌ನಲ್ಲೇ ಈ ಹುಡುಗ ಅಪರಿಚಿತನಾಗಿದ್ದ. ಆದರೆ, ಐಪಿಎಲ್‌ನಲ್ಲಿ ಸ್ಟಾರ್ ಆಗಿ ಹೊರಹೊಮ್ಮಿದ ಬಳಿಕ ಪಟೇಲ್ ಅವರ ಮನೆ ಸದಾ ಜನರಿಂದ ಗಿಜಿಗುಡಲು ಆರಂಭಿಸಿದೆ.

ಅಕ್ಷರ್ ಅವರು 2013ರಲ್ಲೇ ಐಪಿಎಲ್‌ಗೆ ಆಯ್ಕೆಯಾದರೂ ಮೊದಲ ಪಂದ್ಯ ಆಡಿದ್ದು ಮಾತ್ರ 2014ರಲ್ಲಿ. ಮೊದಲು ಮುಂಬೈ ಇಂಡಿಯನ್ಸ್ ತಂಡದ ಭಾಗವಾಗಿದ್ದ ಅವರು, ಬಳಿಕ ಕಿಂಗ್ಸ್ ಇಲೆವನ್ ಪಂಜಾಬ್ ತಂಡವನ್ನು ಪ್ರತಿನಿಧಿಸಿದರು. 2014ರಲ್ಲೇ ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ಗೂ ಪದಾರ್ಪಣೆ ಮಾಡಿದ್ದರು. ಟೆಸ್ಟ್‌ನಲ್ಲಿ ಆಡುವ ಅರ್ಹತೆಯನ್ನು ಹೊಂದಿದ್ದರೂ ತಮ್ಮ ರಾಜ್ಯದವರೇ ಆದ ರವೀಂದ್ರ ಜಡೇಜಾ ತಂಡದಲ್ಲಿ ಇದ್ದುದರಿಂದ ಅವಕಾಶದಿಂದ ದೂರವೇ ಉಳಿದಿದ್ದರು. ಆದರೆ, ಜಡೇಜಾ ಗಾಯಗೊಂಡಿದ್ದರಿಂದ ಅಕ್ಷರ್ ಈಗ ಟೆಸ್ಟ್ ಕ್ರಿಕೆಟ್‌ಗೂ ಪದಾರ್ಪಣೆ ಮಾಡುವಂತಾಯಿತು. ಮೊದಲ ಎರಡು ಪಂದ್ಯಗಳಲ್ಲಿ ಅವರ ಸಾಧನೆ ಎಲ್ಲರ ಕಣ್ಣು ಕುಕ್ಕುವಂತಿದೆ.

ಅಕ್ಷರ್ ಮನೆಯಲ್ಲಿದ್ದಾಗ ಏನು ಮಾಡುತ್ತಾರೆ ಎಂಬ ಪ್ರಶ್ನೆಗೆ ‘ವಿಡಿಯೊ ಗೇಮ್ ಆಡ್ತಾ ಇರ್ತಾನೆ ಇಲ್ಲವೇ ಫೋನ್‌ನಲ್ಲಿ ಬ್ಯುಸಿ ಇರ್ತಾನೆ’ ಎಂದು ಆತನ ಸಂಬಂಧಿಗಳು ಉತ್ತರ ನೀಡುತ್ತಾರೆ. ಅಕ್ಷರ್ ತಮ್ಮ ಸಾಧನೆಯ ಮೂಲಕ ಮಧ್ಯಮವರ್ಗದ ಹುಡುಗರಿಗೆ ಕಷ್ಟಪಟ್ಟರೆ ಎತ್ತರಕ್ಕೆ ಏರಬಹುದು ಎಂಬ ಕನಸನ್ನು ಸಹ ತುಂಬಿದ್ದಾರೆ.

■ ಪ್ರವೀಣ ಕುಲಕರ್ಣಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65